

ಮರಗಟ್ಟಿಸುವ ಕೊರೆವ ಚಳಿ. ಬೇಸಿಗೆಯಲ್ಲೂ ಸೊನ್ನೆಗಿಂತ ಬಹಳ ಹೆಚ್ಚೇನೂ ಇರದ ವಾತಾವರಣ. ಸಮುದ್ರ ಮಟ್ಟಕ್ಕೆ ಹೋಲಿಸಿದರೆ ಸುಮಾರು ಶೇಕಡ 60ರಷ್ಟು ಮಾತ್ರ ಗಾಳಿಯ ಒತ್ತಡ ಅಲ್ಲಿ. ಬೇರೆಡೆಯಿಂದ ಬಂದವರಿಗೆ ಅಲ್ಲಿನ ವಾತಾವರಣಕ್ಕೆ ಮೈ ಹೊಂದಿಕೊಳ್ಳುವುದಕ್ಕೇ 2–3 ದಿನ ಬೇಕು. ಆಮ್ಲಜನಕದ ಕೊರತೆಯಿಂದ ಕೆಲವರಿಗೆ ಉಸಿರಾಟದ ತೊಂದರೆಯಾಗುವುದೂ ಉಂಟು. ಇಂಥ ಜಾಗದಲ್ಲಿ ಯಾಕೆ? ಇಲ್ಲೇ ಎಲ್ಲೋ ಬೆಂಗಳೂರಿನ ಹತ್ತಿರ ಮಾಡಬಾರದಿತ್ತೇ?

ಯಾಕೆಂದರೆ, ಮೇಲೆ ಹೇಳಿದ 'ತೊಂದರೆಗಳು' ಇರುವ ಜಾಗವೇ ಆಕಾಶಕಾಯಗಳ ಅಧ್ಯಯನಕ್ಕೆ ಹೇಳಿ ಮಾಡಿಸಿದ ಜಾಗ. ಹಾನ್ಲೆ ಸಮೀಪದಲ್ಲಿ ಯಾವುದೇ ದೊಡ್ಡ ಪಟ್ಟಣ, ಕಾರ್ಖಾನೆಗಳಾಗಲೀ ಇಲ್ಲ. ಅಲ್ಲೊಂದು ಇಲ್ಲೊಂದು ಸಣ್ಣ ಪುಟ್ಟ ಹಳ್ಳಿಗಳನ್ನು ಬಿಟ್ಟರೆ ಜನವಸತಿ ಬಹಳ ಕಡಿಮೆ. ಅದರಿಂದ ಬೆಳಕು ಹೊಗೆಗಳ ಕಾಟವೂ ಕನಿಷ್ಠ. ಅಷ್ಟೇ ಅಲ್ಲ. ವಾತಾವರಣ ಕಡಿಮೆ ಇರುವುದರಿಂದ ಬೆಳಕಿನ ವಕ್ರೀಕರಣವೂ ಕಡಿಮೆ. ಬೆಳಕನ್ನು ಹೀರಿಕೊಳ್ಳುವ/ಚದುರಿಸುವ ದೂಳಿನ ಕಣಗಳು ಕಡಿಮೆ. ಹಾಗೆ ನೋಡಿದರೆ ಪ್ರಪಂಚದ ಬಹಳಷ್ಟು ದೊಡ್ಡ ದೂರದರ್ಶಕಗಳು ಇರುವುದು ಇಂಥ ಜಾಗಗಳಲ್ಲೇ.

ವಿಜ್ಞಾನಿಗಳಿಗೆ ಮಾತ್ರವಲ್ಲ, ಆಕಾಶದಲ್ಲಡಗಿರುವ ಅದ್ಭುತಗಳನ್ನು ಕಣ್ಣಲ್ಲಿ ನೋಡಿ ಅನುಭವಿಸಬೇಕೆನ್ನುವ ಎಲ್ಲರಿಗೂ ಹಾನ್ಲೆ ಅವಿಸ್ಮರಣೀಯ ಅನುಭವ ನೀಡುತ್ತದೆ. ಇತ್ತೀಚೆಗೆ ಹಾನ್ಲೆ ಮತ್ತು ಸುತ್ತಲಿನ 22 ಕಿ.ಮೀ. ಜಾಗವನ್ನು 'ಕತ್ತಲ ಮೀಸಲು ಜಾಗ' (**Dark Sky Reserve**) ಎಂದು ಘೋಷಿಸಲಾಗಿದೆ. ಹೇಗೆ ಹುಲಿ, ಕರಡಿ, ಜಿಂಕೆ ಮುಂತಾದ ಪ್ರಾಣಿಗಳ ರಕ್ಷಣೆಗೆ ಕಾಡನ್ನು ಮೀಸಲಿಡುತ್ತೇವೋ ಇದೂ ಹಾಗೇ. ಕತ್ತಲನ್ನು ಕಾಪಾಡಲು ಒಂದಷ್ಟು ಜಾಗವನ್ನು ಮೀಸಲಿಡುವುದು. ಭಾರತದ ಮಟ್ಟಿಗೆ ಇದು ಮೊದಲ ಪ್ರಯತ್ನ. ಲಡಾಖ್ ಆಡಳಿತ ಮತ್ತು ಭಾರತೀಯ ಬಾಹ್ಯಾಕಾಶ ಸಂಸ್ಥೆ ಒಟ್ಟಿಗೆ ಸೇರಿ ಈ ವಿಶಿಷ್ಟ ಕಾರ್ಯಕ್ರಮ ಕೈಗೊಂಡಿವೆ. **Hanle Dark Sky Reserve (HDSR)** ಎಂದು ಘೋಷಿಸಿದ ನಂತರ ಹಾನ್ಲೆಗೆ ಬರುವ ಪ್ರವಾಸಿಗಳ ಸಂಖ್ಯೆ ಹೆಚ್ಚಾಗಿದೆ.

ನಾನು ಹಾನ್ಲೆಗೆ ಮೊದಲ ಸಾರಿ ಹೋಗಿದ್ದು 2019ರಲ್ಲಿ. ಆಗ ಅಲ್ಲಿ ಹೊರಗಿನಿಂದ ಬಂದ ಯಾತ್ರಿಗಳು ಬೆರಳೆಣಿಕೆಯಷ್ಟಿದ್ದರು. 2024ರಲ್ಲಿ 2ನೇ ಬಾರಿ ಹೋದಾಗ ಆ ಸಂಖ್ಯೆ ಬಹಳ ಹೆಚ್ಚಾಗಿದ್ದನ್ನು ಕಂಡೆ. ವಿಪರ್ಯಾಸವೆಂದರೆ ಪ್ರವಾಸಿಗಳಿಂದ ಇಲ್ಲಿನ ಕತ್ತಲು ಹಾಳಾಗುತ್ತಿದೆ. ರಾತ್ರಿ 10 ಗಂಟೆಯಾದರೂ ಕಾರು, ಬೈಕುಗಳ ಓಡಾಟ ನಿಲ್ಲುತ್ತಿರಲಿಲ್ಲ. ಅವುಗಳ ಹೆಡ್ ಲೈಟ್‌ಗಳು ತಮ್ಮ ಭಾರಿ ಪ್ರಮಾಣದ ಬೆಳಕನ್ನು ಕಿಲೋ ಮೀಟರುಗಟ್ಟಲೆ ಹರಡಿ ಅಲ್ಲಿನ ಕತ್ತಲೆಯ ನಿರಭ್ರತೆಯನ್ನು ಹಾಳು ಮಾಡುತ್ತಿದ್ದವು. ಇದಕ್ಕೆ ಕಾರಣ, ತಿಳಿವಳಿಕೆಯ ಅಭಾವ.

ಪ್ರವಾಸಿಗಳಿಗೆ **HDSR**ನ ಉದ್ದೇಶ, ಇಲ್ಲಿನ ಕತ್ತಲನ್ನು ಕಾಪಾಡಲು ಏನು ಮಾಡಬೇಕು ಎಂಬುದನ್ನು ತಿಳಿಹೇಳುವುದು ಹೇಗೆ? ಕತ್ತಲೆಯನ್ನೇ ನೋಡಿರದ ನಮ್ಮ ಜನಗಳಿಗೆ ಇದನ್ನು ಯಾರು ತಿಳಿಸಬೇಕು? ಇದಕ್ಕೂ ಸರ್ಕಾರ ಮುಂದಾಗಿದೆ. ಹಾನ್ಲೆಯಿಂದ ಐದಾರು ಕಿ.ಮೀ. ಮುನ್ನವೇ ಮಾಹಿತಿ ಕೇಂದ್ರ ತೆರೆಯಲಾಗುತ್ತಿದೆ. ಹೊರಗಿನಿಂದ ಬರುವ ವಾಹನಗಳನ್ನು, ಪ್ರವಾಸಿಗಳನ್ನು ನಿಲ್ಲಿಸಿ, ಅವರಿಗೆ ಕತ್ತಲನ್ನು ಕಾಪಾಡುವ ಬಗ್ಗೆ ತಿಳಿವಳಿಕೆ ಕೊಡುವುದು ಇದರ ಉದ್ದೇಶ. ಮುಂದಿನ


ಆಂಡ್ರೊಮೆಡಾ ಗ್ಯಾಲಕ್ಸಿ


ವಿವಿಧ ಆಕಾರಗಳನ್ನು ರೂಪಿಸುವ ನಕ್ಷತ್ರಪುಂಜಗಳು

ವರ್ಷದ ಹೊತ್ತಿಗೆ ಅದು ಕಾರ್ಯಾರಂಭ ಮಾಡಬಹುದು. ಹಾನ್ಲೆಗೆ ಹೋಗುವುದು ಕತ್ತಲ ಲೋಕವನ್ನು ಆನಂದಿಸಲು. ಬೆಳಕೇ ಕತ್ತಲಿನ ವೈರಿ. ಹುಲಿಗಳನ್ನು ನೋಡಬೇಕೆಂದರೆ ಮೊದಲು ಅವನ್ನು ಉಳಿಸಬೇಕಲ್ಲವೇ? ಹಾಗೆಯೇ ಕತ್ತಲನ್ನು 'ನೋಡಲು', ಅನುಭವಿಸಲು ಕತ್ತಲೆಯನ್ನು ಉಳಿಸಬೇಕು.

ಹಾನ್ಲೆಗೆ ಹೋಗುತ್ತಿದ್ದಂತೆ ಕತ್ತಲಾಗುತ್ತಿದ್ದಂತೆ ಆಕಾಶದತ್ತ ಮುಖ ಮಾಡಿ ನಿಂತರೆ ಅಥವಾ ನೆಲದ ಮೇಲೆ ಮಲಗಿ ಮೇಲೆ ನೋಡಿದರೆ ಅದ್ಭುತ ಪ್ರಪಂಚವೊಂದು ಕಣ್ಮುಂದೆ ತೆರೆದುಕೊಳ್ಳುತ್ತದೆ. ಸಾವಿರಾರು ಮಿನುಗುವ ನಕ್ಷತ್ರಗಳ ಲೋಕದಲ್ಲಿ ಕಳೆದುಹೋಗುವ ಅನುಭವ. ನಿಮಗೆ ಗೊತ್ತೆ? ಹಾನ್ಲೆಯಲ್ಲಿ ನಮ್ಮ ನೆರೆಯ ಆಂಡ್ರೊಮೆಡಾ ಗ್ಯಾಲಕ್ಸಿ ಕೂಡ ಬರಿಗಣ್ಣಿಗೆ ಗೋಚರಿಸುತ್ತದೆ. ನಮ್ಮ ಆಕಾಶಗಂಗೆಯ ದರ್ಶನವಂತೂ ಮೈ ನವಿರೇಳಿಸುವ, ಮರೆಯಲಾರದ ಅನುಭವ. ದಕ್ಷಿಣದಿಂದ ಪ್ರಾರಂಭವಾಗಿ, ತಲೆಯ ಮೇಲೆ ಹಾದು ಮೋಡದೋಪಾದಿಯಲ್ಲಿ ಉತ್ತರದ ದಿಗಂತದವರೆಗೂ ಹಾದು ಹೋಗುವುದನ್ನು ನೋಡುವುದು ಅವಿಸ್ಮರಣೀಯ. ಬೈನಾಕ್ಯುಲರ್ ಇದ್ದರೆ ಬರಿಗಣ್ಣಿಗೆ ಸಾವಿರ ಸಂಖ್ಯೆಯಲ್ಲಿ ಕಂಡ ನಕ್ಷತ್ರಗಳು ಲಕ್ಷಗಳಾಗುತ್ತವೆ! ಆ ಅಗಾಧತೆಯ ಮುಂದೆ ನಾವು ಎಷ್ಟು ಸಣ್ಣವರೆಂಬ ಭಾವನೆ ಮೂಡುವುದು ಸಹಜವೇ.

ಕೇವಲ ಹತ್ತಿಪ್ಪತ್ತು ವರ್ಷಗಳ ಹಿಂದೆ ಕರ್ನಾಟಕದ ಎಷ್ಟೋ ಜಾಗಗಳಲ್ಲಿ, ಅದರಲ್ಲೂ ಪಶ್ಚಿಮಘಟ್ಟಗಳಲ್ಲಿ ಹಾನ್ಲೆಯಷ್ಟಲ್ಲದಿದ್ದರೂ ಅದಕ್ಕೆ ಹೋಲಿಸಬಹುದಾದಂಥ ಕತ್ತಲಿನ ಶುಭ್ರ ಆಕಾಶ ಇರುತ್ತಿತ್ತು. ಆದರೆ ಈಗ ಎಲ್ಲೆಂದರಲ್ಲಿ ತಲೆಯೆತ್ತಿರುವ ಹೋಮ್ ಸ್ಟೇ, ರೆಸಾರ್ಟ್ ಇತ್ಯಾದಿಗಳು ಅನಗತ್ಯವಾಗಿ ದೊಡ್ಡ ಪ್ರಖರವಾದ ವಿದ್ಯುತ್ ದೀಪಗಳಿಂದ ತಮ್ಮ ಸುತ್ತಲಿನ ಬೆಟ್ಟ ಗುಡ್ಡಗಳಿಗೆಲ್ಲ ಬೆಳಕು ಹರಿಸಿ ನಕ್ಷತ್ರ ಲೋಕದ ಸೊಬಗನ್ನು ಹಾಳು ಮಾಡುತ್ತಿವೆ.

ಈಗಲಾದರೂ ಕತ್ತಲ ಬಗ್ಗೆ, ಕತ್ತಲ ಆಕಾಶದ ಬಗ್ಗೆ ಪ್ರೀತಿ ಹುಟ್ಟಬೇಕಿದೆ. ನಕ್ಷತ್ರಗಳಿಗೆ ಮತ್ತೆ ಮಿನುಗುವ ಅವಕಾಶ ಕೊಡಬೇಕಿದೆ. ಹಾಗಾದರೆ ಮಾತ್ರ ಕತ್ತಲ ಲೋಕದ ದಿವ್ಯ ಅನುಭವ ನಮಗೆ ದಕ್ಕಲು ಸಾಧ್ಯವಲ್ಲವೇ?

ಪ್ರತಿಕ್ರಿಯಿಸಿ: **feedback@sudha.co.in**